ಆ) ಹಾಗಿದ್ದರೆ, ಇದಕ್ಕೆ ಕಾರಣವೇನು?

ಇ) ರಪ್ತು ವಲಯ ಕಛೇರಿಯನ್ನು ವಿಜಾಪುರಕ್ಕೆ ವರ್ಗಾಯಿಸಿರುವುದರಿಂದ ಧಾರವಾಡ, ನಗರದ ಬೆಳಗಾವಿ ಹಾವೇರಿ ಬಳ್ಳಾರಿ ರಾಯಚೂರು ಕೊಪ್ಪಳ, ಉತ್ತರ ಕನ್ನಡ ಜಿಲ್ಲೆಗಳ ರೈತರಿಗೆ ಅನ್ಯಾಯ ಮಾಡಿದಂತೆ ಆಗಿಲ್ಲವೇ?

ಈ) ಹುಬ್ಬಳ್ಳಿಯು ಬಾಂಬೆ–ಪೂನಾ ರಾಷ್ಟ್ರೀಯ ಹೆದ್ದಾರಿಯಲ್ಲಿರುವುದರಿಂದ ರಪ್ತು ಮಾಹಿತಿಗೆ ಒಳ್ಳೆಯ ಮುಖ್ಯ ಕೇಂದ್ರವಾಗಿದ್ದು, ಹಾಗೂ ಒಳ್ಳೆಯ ರಸ್ತೆ, ರೈಲು ಹಾಗೂ ವಿಮಾನ ಸೌಕರ್ಯಗಳನ್ನು ಹೊಂದಿರುವುದರಿಂದ ರಪ್ತು ವಲಯ ಕಛೇರಿಯನ್ನು ಹುಬ್ಬಳ್ಳಿಯಲ್ಲಿಯೇ ಮುಂದುವರಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

ಅ) ಹುಬ್ಬಳ್ಳಿಯಲ್ಲಿ ರಪ್ತುವಲಯ ಕಛೇರಿಯನ್ನು ಸ್ಥಾಪಿಸುವ ಪ್ರಸ್ತಾವನೆ ಇರಲಿಲ್ಲ ಕಾರಣ ಬಿಜಾಪೂರಕ್ಕೆ ಸ್ಥಳಾಂತರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಅನ್ವಯಿಸುವುದಿಲ್ಲ

ಇ) ಅನ್ವಯಿಸುವುದಿಲ್ಲ

ಈ) ಅನ್ವಯಿಸುವುದಿಲ್ಲ

ಎನ್.ಜಿ.ಇ.ಎಫ್.ನ ನೌಕರರ ವಜಾ ಮಾಡಿರುವುದನ್ನು ಕುರಿತು

4174 (4766) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಬಂಡವಾಳ ಹಿಂತೆಗೆಯುವಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರಿ ಸ್ವಾಮ್ಯದ ಎನ್.ಜಿ.ಇ.ಎಫ್.ನಲ್ಲಿ ಸ್ವಯಂ ನಿವೃತ್ತಿ ಕೊಡದ ಕಾರಣಕ್ಕಾಗಿ ಎಷ್ಟು ಜನ ಉದ್ಯೋಗಿಗಳನ್ನು ವಜಾ ಮಾಡಲಾಗಿದೆ;

ಆ) ಈ ನೌಕರರಲ್ಲಿ ಅರ್ಧಕ್ಕೂ ಹೆಚ್ಚು ಜನ ಪರಿಶಿಷ್ಟ ಜಾತಿ/ಪ.ವರ್ಗಕ್ಕೆ ಸೇರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ, ವಜಾಗೊಂಡಿರುವ ಎಷ್ಟು ಜನ ನೌಕರರು ಈ ವರ್ಗಕ್ಕೆ ಸೇರಿದವರಾಗಿರುತ್ತಾರೆ;

ಇ) 24.02.2003ರ ಸರ್ಕಾರಿ ಆದೇಶದಂತೆ ಎನ್.ಜಿ.ಇ.ಎಫ್. ಎಷ್ಟು ಜನ ನೌಕರರ ಸೇವೆಯನ್ನು ಬೇರೆ ಬೇರೆ ಇಲಾಖೆಗಳ ಸೇವೆಯಲ್ಲಿ ವಿಲೀನಗೊಳಿಸಲಾಗಿದೆ; ವಿವರ ಹೆಸರುಗಳನ್ನು ನೀಡುವುದು;

ಈ) ಮಂಡ್ಯದ ಮೈಸೂರು ಅಸಿಟೇಟ್ ಕಾರ್ಖಾನೆಯು ಸಹ ಮುಚ್ಚಿದ್ದು, ಅಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸುಮಾರು 45 ಜನ ನೌಕರರನ್ನು ಬೇರೆ ಬೇರೆ ಇಲಾಖೆಗಳಲ್ಲಿ ನಿಯೋಜನೆ ಮೇಲೆ ತೆಗೆದುಕೊಂಡಿರುವುದು ನಿಜವೇ;

ಉ) ಹಾಗಿದ್ದಲ್ಲಿ, ಬೇರೆ ಬೇರೆ ಇಲಾಖೆಗಳಲ್ಲಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದ ಎನ್.ಜಿ.ಇ.ಎಫ್. ನೌಕರರ ಸೇವೆಯನ್ನು ಹಿಂದಕ್ಕೆ ಪಡೆದು ಅವರಿಗೆ ಸ್ವಯಂ ನಿವೃತ್ತಿ ಯೋಜನೆ ನೀಡಲು ಕಾರಣವೇನು; ಇದು ತಾರತಮ್ಯ ನೀತಿಯಲ್ಲವೇ;

ಊ) ಈ ಹಿನ್ನೆಲೆಯಲ್ಲಿ ಇನ್ನು 12 ರಿಂದ 15 ವರ್ಷ ಸೇವೆ ಬಾಕಿ ಇರುವ ಮತ್ತು ಉದ್ಯೋಗದ ಅವಶ್ಯಕತೆ ಇರುವ ಪ.ಜಾ/ಪ. ವರ್ಗಕ್ಕೆ ಸೇರಿದ ಎನ್.ಜಿ.ಇ.ಎಫ್. ನೌಕರರನ್ನು ಬೇರೆ ಬೇರೆ ಇಲಾಖೆಗಳಿಗೆ ನಿಯೋಜನೆ ಮೇರೆಗೆ ತೆಗೆದುಕೊಳ್ಳಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಬಂಡವಾಳ ಹಿಂತೆಗೆಯುವಿಕೆ ಸಚಿವರು.)

ಅ) 121 ಉದ್ಯೋಗಿಗಳು. ಇವರುಗಳಿಗೆ ಕೈಗಾರಿಕಾ ವ್ಯಾಜ್ಯ ಕಾಯ್ದೆಯಡಿ ಮುಚ್ಚುವ (Closure) ಪರಿಹಾರವನ್ನು ನೀಡಲಾಗಿರುತ್ತದೆ.

ಆ) ಈ ರೀತಿ ಮುಕ್ತಿಗೊಳಿಸಲಾದ 121 ಉದ್ಯೋಗಿಗಳಲ್ಲಿ 53 ಜನರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದವರಾಗಿರುತ್ತಾರೆ.

ಇ) ಸರ್ಕಾರಿ ಆದೇಶ ದಿನಾಂಕ: 24-02-2003 ರಂತೆ ವಿವಿಧ ಮಂಡಳಿ ನಿಗಮ ಮತ್ತು ಸಾರ್ವಜನಿಕ ಉದ್ದಿಮೆಗಳಲ್ಲಿ ನಿಯೋಜನೆ ಮೇಲಿರುವ 9 ಉದ್ಯೋಗಿಗಳು ಮಾತ್ರ ವಿಲೀನಗೊಳ್ಳಲು ಅರ್ಹರಿರುತ್ತಾರೆ.

ಹೆಸರುಗಳು:	ನಿಯೋಜನೆ ಮೇಲೆ
1. ಶ್ರೀ ಧನಂಜಯ ಎಸ್.ಡಿ.	ಕೆಎಸ್ಐಐಡಿಸಿ
2. ಶ್ರೀ ಶ್ರೀನಿವಾಸ ರೆಡ್ಡಿ ಎಸ್.	ಕೆಪಿಟಿಸಿಎಲ್
3. ಶ್ರೀ ಶ್ರೀನಿವಾಸ್ ಟಿ.ಎಸ್.	ಕೆಪಿಟಿಸಿಎಲ್
4. ಶ್ರೀ ರಮೇಶ್ ಹೆಚ್.	ಕೆಪಿಟಿಸಿಎಲ್
5. ಶ್ರೀ ವೆಂಕಟಾಚಲಪತಿ ಎ.	ಕೆಪಿಟಿಸಿಎಲ್
6. ಶ್ರೀಮತಿ ನಂದಿನಿ	ಕೆಪಿಟಿಸಿಎಲ್
7. ಶ್ರೀ ಉಮಾಪತಿ ಎಸ್.	ಬಿಡಬ್ಲ್ಯೂಎಸ್ಎಸ್ಬಿ
8. ಶ್ರೀ ಜಗದೀಶ್ ಎನ್.	ಎಮ್ಎಸ್ಐಎಲ್
9. ಶ್ರೀ ಪರಮೇಶ್ ಎಮ್.ಎಸ್.	ಕೆ.ಎಸ್.ಸಿ/ಎಸ್.ಟಿ ಡಿ.ಸಿ

ಸರ್ಕಾರದ ಇಲಾಖೆಗಳಲ್ಲಿ ನಿಯೋಜನೆ ಮೇಲಿರುವ ಉದ್ಯೋಗಿಗಳು ವಿಲೀನಗೊಳ್ಳಲು ಅರ್ಹರಿರುವುದಿಲ್ಲ.

ಈ) ಮೈಸೂರು ಅಸಿಟೇಟ್ ಮತ್ತು ಕೆಮಿಕಲ್ಸ್ ಸಂಸ್ಥೆಯ 49 ಉದ್ಯೋಗಿಗಳು ಸರ್ಕಾರಿ ಇಲಾಖೆಗಳು/ನಿಗಮಗಳಲ್ಲಿ ನಿಯೋಜನೆ ಮೇಲೆ ಇರುತ್ತಾರೆ. ಸರ್ಕಾರಿ ಆದೇಶ ದಿನಾಂಕ 24-02-2003 ರಂತೆ 3 ಉದ್ಯೋಗಿಗಳು ಮಾತ್ರ ವಿಲೀನಗೊಳ್ಳಲು ಅರ್ಹರಿರುತ್ತಾರೆ. ಉಳಿದ ನೌಕರರುಗಳಿಗೆ ಸ್ವಯಂ ನಿವೃತ್ತಿ ಯೋಜನೆಯ ಪರಿಹಾರವನ್ನು ನೀಡಲಾಗುತ್ತದೆ.

ಉ) ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್ (ಬಿಪಿಇ) 38 ಎಆರ್ಯು 2002 ದಿನಾಂಕ: 24-02-2003 ರಂತೆ ಸರ್ಕಾರಿ ಇಲಾಖೆಗಳಲ್ಲಿ ನಿಯೋಜನೆ ಮೇಲೆ ಇರುವವರು ವಿಲೀನಗೊಳ್ಳಲು ಅರ್ಹರಿರುವುದಿಲ್ಲ. ಸಂಸ್ಥೆಯನ್ನು ಮುಚ್ಚುತ್ತಿದ್ದುದರಿಂದ ವಿವಿಧ ಸರ್ಕಾರಿ ಇಲಾಖೆಗಳಲ್ಲಿ ನಿಯೋಜನೆ ಮೇಲಿದ್ದ ನೌಕರರುಗಳನ್ನು ಸೇವೆಯಿಂದ ಹಿಂದೆ ಪಡೆಯ ಕರ್ತವ್ಯದಿಂದ ಬಿಡುಗಡೆಗೊಳಿಸಿ ಸ್ವಯಂ ನಿವೃತ್ತಿ ಯೋಜನೆಯನ್ನು ನೀಡಬೇಕಾಯಿತು. ಹಾಗಾಗಿ ಇದು ಸರ್ಕಾರದ ಹಂತದಲ್ಲಿ ತಾರತಮ್ಯವಾಗಿರುವುದಿಲ್ಲ.

ಊ) ಮೇಲಿನ ಉದ್ಯೋಗಿಗಳನ್ನು ಈಗಾಗಲೇ ಸೇವೆಯಿಂದ ವಿಮುಕ್ತಿಗೊಳಿಸುವುದರಿಂದ ಅವರು ಎನ್.ಜಿ.ಇ.ಎಫ್. ನೌಕರರುಗಳಾಗಿ ಉಳಿದಿರುವುದಿಲ್ಲ. ಆದುದರಿಂದ ಅವರುಗಳನ್ನು ಇತರೆ ಸಾರ್ವಜನಿಕ ಸಂಸ್ಥೆಗಳಿಗೆ ನಿಯೋಜನೆ ಮೇಲೆ ಕಳುಹಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.